ಅ) (ರೂ. ಲಕ್ಷಗಳಲ್ಲಿ)

ಉಡುಪಿ		ಕಾರ್ಕಳ		ಕುಂದಾಪುರ	
ಗುರಿ	ಬಿಡುಗಡೆಯಾದ ಹಣ	ಗುರಿ	ಬಿಡುಗಡೆಯಾದ ಹಣ	ಗುರಿ	ಬಿಡುಗಡೆಯಾದ ಹಣ
3036	457.72	1630	188.98	1763	200.49

ಆ) ಉಡುಪಿ ತಾಲ್ಲೂಕಿನಲ್ಲಿ 650 ಮನೆಗಳನ್ನು ಪೂರೈಸಬೇಕಾಗಿದೆ, ಹಾಗೂ 99-2000ನೇ ಸಾಲಿಗೆ ಉಡುಪಿ ಜಿಲ್ಲೆ ಮಾರ್ಚ್ ತಿಂಗಳಲ್ಲಿ 424 ಮನೆಗಳ ಗುರಿಯನ್ನು ನೀಡಿದೆ.

ಪಾವತಿ ಮಾಡಲು ಬಾಕಿ ಇರುವ ಹಣ (ರೂ. ಲಕ್ಷಗಳಲ್ಲಿ)

ಉಡುಪಿ	ಕುಂದಾಪುರ	ಕಾರ್ಕಳ
170.16	152.11	117.02

ಇ) ಅತೀ ಶೀಘ್ರದಲ್ಲಿ.

ಆಶ್ರಯ ಮನೆಗಳಿಗೆ ಹಣ ಬಿಡುಗಡೆ.

2515(2091)

ಶ್ರೀ ಗೋಪಾಲ ಭಂಡಾರಿ.ಹಬ್(ಕಾರ್ಕಳ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಆಶ್ರಯ ಯೋಜನೆಯಲ್ಲಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು? ಅದಕ್ಕೆ ಒದಗಿಸಿದ ಮೊತ್ತವೆಷ್ಟು?

ಆ) ಒದಗಿಸಿದ ಮೊತ್ತದಲ್ಲಿ ಬಿಡುಗಡೆಯಾದ ಮೊತ್ತವೆಷ್ಟು?

ಇ) ಉಡುಪಿ ಜಿಲ್ಲೆಯಲ್ಲಿ ಕಾರ್ಕಳ ಉಡುಪಿ ಕುಂದಾಪುರ ತಾಲ್ಲೂಕುಗಳಿಗೆ ಕಳೆದ ಮೂರು ವರ್ಷಗಳಲ್ಲಿ ಒದಗಿಸಿದ ಮನೆಗಳ ಸಂಖ್ಯೆ ಎಷ್ಟು? ಮತ್ತು ಒದಗಿಸಿದ ಹಣದ ಮೊತ್ತವೆಷ್ಟು? ಹಾಗೂ ಮೂರು ವರ್ಷದಲ್ಲಿ ಬಿಡುಗಡೆಯಾದ ಮೊತ್ತವೆಷ್ಟು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು):

ಅ) ಮಂಜೂರಾದ ಮನೆಗಳ ಸಂಖ್ಯೆ : 2,36,633

ಒದಗಿಸಿದ ಮೊತ್ತ :

ಸಹಾಯ ಧನಕ್ಕಾಗಿ ಒದಗಿಸಿದ ಮೊತ್ತ ರೂ. 12102.88 ಲಕ್ಷ

ಆ) ಬಿಡುಗಡೆಯಾದ ಮೊತ್ತ : 21435.76 ಲಕ್ಷಗಳು.

ಇ)

	ಒದಗಿಸಿದ ಮನೆಗಳ ಸಂಖ್ಯೆ	ಒದಗಿಸಿದ ಹಣ	ಬಿಡುಗಡೆಯಾದ ಹಣ
ಉಡುಪಿ	2174	456.50	187.03
ಕುಂದಾಪುರ	800	155.00	140.46
ಕಾರ್ಕಳ	1450	281.50	149.65

ಉಡುಪಿ ಜಿಲ್ಲೆಯಲ್ಲಿ ನಿವೇಶನ ಮಂಜೂರಾತಿ ಮತ್ತು ಅಕ್ರಮ ಸಕ್ರಮದ ವಿಚಾರ ಕುರಿತು.

2516(3127)

ಶ್ರೀ ಗೋಪಾಲ ಬಂಡಾರಿ.ಹೆಚ್.(ಕಾರ್ಕಳ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ನಮೂನೆ 50ರಲ್ಲಿ ಮತ್ತು 53ರಲ್ಲಿ ಸಲ್ಲಿಸಿರುವ ಅಕ್ರಮ ಸಕ್ರಮ ಅರ್ಜಿಗಳ ಸಂಖ್ಯೆ ಎಷ್ಟು; ಆ ಪೈಕಿ ಎಷ್ಟು ಅರ್ಜಿಗಳು ತೀರ್ಮಾನವಾಗಿವೆ; ಬಾಕಿ ಎಷ್ಟಿವೆ; (ತಾಲ್ಲೂಕುವಾರು ವಿವರ ಕೊಡಬೇಕಾಗಿ ವಿನಂತಿ)

ಆ) ಅಕ್ರಮವಾಗಿ ಅನೇಕ ವರ್ಷಗಳಿಂದ ಮನೆ ಕಟ್ಟಿಕೊಂಡವರಿಗೆ ಅವರು ವಾಸವಿರುವ ನಿವೇಶನ ಮಂಜೂರು ಮಾಡಲು ಕೈಗೊಂಡ ಕ್ರಮವೇನು.

ಇ) ಮಧ್ಯಮ ವರ್ಗದವರಿಗೆ ವಾರ್ಷಿಕ ಆದಾಯ 12 ಸಾವಿರಕ್ಕಿಂತ ಜಾಸ್ತಿ ಇರುವವರಿಗೆ ಸ್ಥಳ ಮೌಲ್ಯ ಪಾವತಿಸಿದರೆ ನಿವೇಶನ ಮಂಜೂರು ಮಾಡಲು